# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಾರ್ಪೋರೇಟ್ ಐಡೆಂಟಿಫಿಕೇಷನ್ ಸಂಖ್ಯೆ: (CIN) : U40109KA2004SGC035177

ನಿಗಮದ ನೋಂದಾಯಿತ ಕಛೇರಿ ವಿಳಾಸ: ನಂ.29,
3ನೇ ಮಹಡಿ, ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
ವಿಜಯನಗರ, 2ನೇ ಹಂತ, ಮೈಸೂರು-570017

ನಿಗಮದ ವೆಬ್‌ಸೈಟ್ ವಿಳಾಸ www.cescmysore.org

ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ ಕಛೇರಿ,
ಕಾರ್ಯ ಮತ್ತು ಪಾಲನೆ ವಿಭಾಗ, ಸೆಸ್ಕ್, ಮಡಿಕೇರಿ

ದೂರವಾಣಿ: 08272-225650
222665/9449598601

---

ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಸೋಪೇಟೆ/2018-19/ 5170-5176 ದಿನಾಂಕ: 21-03-19.

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ 19.01.2019 ಗುರುವಾರ ಪೂರ್ವಾಹ್ನ 10.00 ಗಂಟೆಯಿಂದ 11.30 ಗಂಟೆಯವರೆಗೆ ಸೆಸ್ಕ್ ಕಾ ಮತ್ತು ಪಾ ಉಪವಿಭಾಗ ಕಛೇರಿ ಸೋಮವಾರಪೇಟೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಚಾವಿಸನಿನಿ ಕಾ ಮತ್ತು ಪಾ ವಿಭಾಗ ಮಡಿಕೇರಿ ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿ.

127

ಉಪಸ್ಥಿತರಿದ್ದ ಅಧಿಕಾರಿಗಳು

ಶ್ರೀಯುತರುಗಳಾದ

1. ಶ್ರೀ.ಬಿ.ಸೋಮಶೇಖರ್ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಸೆಸ್ಕ್ ಕಾ ಮತ್ತು ಪಾ ವಿಭಾಗ ಮಡಿಕೇರಿ.
2. ಶ್ರೀ ಧನಂಜಯ್. ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಉಪ ವಿಭಾಗ ಸೋಮವಾರಪೇಟೆ.
3. ಶ್ರೀ.ಸಂತೋಷ್ ಕೆ.ಪಿ ಸಹಾಯಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಕಾ ಮತ್ತು ಪಾ ಶಾಖೆ ಸೋಮವಾರಪೇಟೆ.
4. ಶ್ರೀ ದಯಾನಂದ ಬಿ. ಮೇಲ್ವಿಚಾರಕರು ಕಾ ಮತ್ತು ಪಾ ಶಾಖೆ ಸೋಮವಾರಪೇಟೆ.
5. ಶ್ರೀಮತಿ.ಕವಿತಾ.ಕೆ ಸಹಾಯಕ ಇಂಜಿನಿಯರ್(ತಾಂ) ಪ್ರಭಾರ ಸೆಸ್ಕ್ ಉಪ ವಿಭಾಗ ಸೋಮವಾರಪೇಟೆ
6. ಶ್ರೀ.ಗುಣಶೇಖರ್ ಹಿರಿಯ ಸಹಾಯಕರು ಚಾ.ವಿ.ಸ.ನಿ.ನಿ ಸೋಮವಾರಪೇಟೆ.
7. ಶ್ರೀ.ಬಿ.ಪಿ.ಹೇಮಂತ್‌ಕುಮಾರ್ ಕಿರಿಯ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಕಾ ಮತ್ತು ಪಾ ಶಾಖೆ ಶನಿವಾರಸಂತೆ.
8. ಶ್ರೀ.ರುಕ್ಮಾಂಗದ ಕುಮಾರ್ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಕಾ ಮತ್ತು ಪಾ ಶಾಖೆ ಶಾಂತಳ್ಳಿ.
9. ಶ್ರೀ.ರಂಗಸ್ವಾಮಿ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಕಾ ಮತ್ತು ಪಾ ಶಾಖೆ ಆಲೂರು ಸಿದ್ದಾಪುರ.
10. ಶ್ರೀ.ಚಂದ್ರಬೋವಿ ಕಿರಿಯ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಕಾ ಮತ್ತು ಪಾ ಶಾಖೆ ಕೊಡ್ಲಿಪೇಟೆ.
11. ಶ್ರೀ ದೀಪಕ್ ಕಿರಿಯ ಸಹಾಯಕರು ಚಾ.ವಿ.ಸ.ನಿ.ನಿ ಶನಿವಾರಸಂತೆ.

AEE/SE 30/3/19

5265 28.3.19

ಸಭೆಯಲ್ಲಿ ಸೋಮವಾರಪೇಟೆ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂಖ್ಯೆ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1) | ಎಸ್.ಡಿ.ಗಣೇಶ್ ಮಸಗೋಡು | 1)ಕುಡಿಯುವ ನೀರು ಸ್ಥಾವರಕ್ಕೆ ವೋಲ್ಟೇಜ್ ಸಮಸ್ಯೆ ಇದ್ದು, ಪ್ರತ್ಯೇಕ ಪರಿವರ್ತಕ ಅಳವಡಿಸುವಂತೆ ಕೇಳಿಕೊಂಡರು.<br><br>2)ಮಸಗೋಡು ಗ್ರಾಮದಲ್ಲಿ IP ಸೆಟ್ ಗಳಿಗೆ low voltage ಸಮಸ್ಯೆ ಇದ್ದು ಹೆಚ್ಚುವರಿ ಪರಿವರ್ತಕ ಅಳವಡಿಸುವಂತೆ ಕೇಳಿಕೊಂಡರು. | 1)ಪ್ರತ್ಯೇಕ ಪರಿವರ್ತಕ ಅಳವಡಿಸುವ ಬಗ್ಗೆ ಅಂದಾಜು ಪಟ್ಟಿ ಮಂಜೂರಾತಿಯಾಗಿದ್ದು ಕಾಮಗಾರಿಯನ್ನು ಟೆಂಡರ್ ಕರೆದು ನಿರ್ವಹಿಸಲು ಕಾರ್ಯನಿರ್ವಾಹಕ ಇಂಜಿನಿಯರ್ ರವರು ನಿರ್ದೇಶಿಸಿದರು.<br>2)ಹೆಚ್ಚುವರಿ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿಯವರಿಗೆ ಕಾರ್ಯನಿರ್ವಾಹಕ ಇಂಜಿನಿಯರ್ ಸೂಚಿಸಿದರು. |

| | | | |
|---|---|---|---|
| 2) | ಎನ್.ಎ ಸುದೀಪ್<br>ಎನ್.ವಿ.ಪವನ್ ಕುಮಾರ್<br>ಕೆ.ಸಿ.ಯತೀಶ್<br>ಬಿ.ಆರ್ ಉತ್ತಯ್ಯ<br>ನೇಗಳ್ಳೆ ಗ್ರಾಮಸ್ಥರು | 1)ನೇಗಳ್ಳೆ ಗ್ರಾಮದಲ್ಲಿ IP ಸೆಟ್ ಸ್ಥಾವರಗಳಿಗೆ ವೋಲ್ಟೇಜ್ ಸಮಸ್ಯೆ ಇದ್ದು, ಹೆಚ್ಚುವರಿ ಪರಿವರ್ತಕ ಅಳವಡಿಸುವಂತೆ ಕೇಳಿಕೊಂಡರು.<br>2)ವಿದ್ಯುತ್ ತಂತಿಗಳು ಆಗಾಗ ತುಂಡಾಗುತ್ತಿದ್ದು ಸರಿಪಡಿಸಲು ಕೇಳಿಕೊಂಡರು. | 1)ಅನಧಿಕೃತ IP ಸೆಟ್‌ಗಳನ್ನು ಡಿಸ್‌ಕನೆಕ್ಷನ್ ಮಾಡಲು ತಿಳಿಸಿ, ಸ್ಥಳಪರಿಶೀಲಿಸಿ ಅಂದಾಜು ಪಟ್ಟಿ ಸಲ್ಲಿಸಲು ಹಾಗೂ<br>2)ಸ್ಥಳಪರಿಶೀಲಿಸಿ ಸರಿಪಡಿಸಲು ಕಾರ್ಯನಿರ್ವಾಹಕ ಇಂಜಿನಿಯರ್ ರವರು ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 3) | ನಾಣಯ್ಯ<br>ಆಲೂರು ಸಿದ್ದಾಪುರ. | 1)ಮನೆ ಮೇಲೆ ಲೈನ್ ತಂತಿ ಹಾದು ಹೋಗಿದ್ದು ಶಿಫ್ಟ್ ಮಾಡಲು ಕೇಳಿಕೊಂಡರು.<br>2)ಆಲೂರುಸಿದ್ದಾಪುರ ಶಾಖಾಕಛೇರಿಗೆ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕೇಳಿಕೊಂಡರು. | 1)ಸ್ವಯಂ ನಿರ್ವಹಣೆ ಯೋಜನೆಯಲ್ಲಿ ಲೈನನ್ನು ಶಿಫ್ಟ್ ಮಾಡುವಂತೆ ಸೂಚಿಸಿ.<br>2)ಸೂಕ್ತ ಸ್ಥಳದ ಕೋರಿಕೆಗಾಗಿ ಪಂಚಾಯ್ತಿಗೆ ಪತ್ರ ಬರೆದು ನಿಗಮದ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಗ್ರಾಹಕರಿಗೆ ಸೂಚಿಸಲಾಯಿತು. |
| 4) | ಸತ್ಯಜಿತ್<br>ದೇವದಾಸ್<br>ಕಲ್ಕಂದೂರು. | 1)ಕಲ್ಕಂದೂರು ಗ್ರಾಮದಲ್ಲಿ ಲೈನ್ ಮನೆ ಮತ್ತು ಹೋಂ ಸ್ಟೇ ಇದ್ದು ಕರೆಂಟ್ ಇರುವುದಿಲ್ಲ. ಲೈನ್ ಅಳವಡಿಸಿ ವಿದ್ಯುತ್ ನೀಡಲು ಕೇಳಿಕೊಂಡರು.<br>2)D.C ಜಯರಾಂ ಹೆಸರಿನಿಂದ ನನ್ನ ತಂದೆ ದೇವದಾಸ್ ಹೆಸರಿಗೆ ಆರ್.ಆರ್ ಸಂಖ್ಯೆಯ ಹೆಸರು ಬದಲಾವಣೆಗೆ ಅರ್ಜಿ ನೀಡಿದ್ದು,ಇನ್ನೂ ಹೆಸರು ಬದಲಾವಣೆ ಆಗಿರುವುದಿಲ್ಲ, ಎಂದು ಕೇಳಿದರು. | 1)ಪಂಚಾಯ್ತಿ ಯಿಂದ NOC ಪಡೆದು ಅರ್ಜಿ ನೊಂದಾಯಿಸಿದಲ್ಲಿ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಹಾಗೂ<br>2)ಸೂಕ್ತ ದಾಖಲಾತಿಗಳನ್ನು ಒದಗಿಸಿದಲ್ಲಿ ಹೆಸರು ಬದಲಾವಣೆ ಮಾಡಿಕೊಡಲಾಗುವುದು ಎಂದು ಗ್ರಾಹಕರಿಗೆ ತಿಳಿಸಿದರು. |
| 5) | ಸುಬ್ರಮಣಿ<br>ಚೌಡ್ಲು ಗ್ರಾಮ | 1)ಕರೆಂಟ್ ಬಿಲ್ ಒಂದೇ ತಿಂಗಳನಲ್ಲಿ ಜಾಸ್ತಿ ಬಂದಿದ್ದು ಸರಿಪಡಿಸಿಕೊಡುವಂತೆ ಕೇಳಿದರು.<br>2)ಚೌಡ್ಲು ಪ್ರಾಥಮಿಕ ಶಾಲೆ ಹತ್ತಿರ ತೋಟದೊಳಗೆ ಇರುವ ಲೈನನ್ನು ರಸ್ತೆ ಬದಿಗೆ ಸ್ಥಳಾಂತರಿಸಲು ಕೇಳಿಕೊಂಡರು. | 1)ಹಿಂದಿನ ಮಾಪಕ ಓದುಗರು ಸರಿಯಾಗಿ ಮಾಪಕ ಓದಿ ಬಿಲ್ಲು ನೀಡದೆ ಇರುವುದರಿಂದ, ಬೇರೆ ಮಾಪಕ ಓದುಗರು ಬಂದಾಗ ಮಾಪಕ ಓದಿ ಬಿಲ್ಲು ನೀಡಿದ್ದರಿಂದ ಒಂದೇ ತಿಂಗಳು ಜಾಸ್ತಿ ಬಿಲ್ಲು ಬಂದಿರುತ್ತದೆ. ಮುಂದಿನ ದಿನಗಳಲ್ಲಿ ಸರಿಯಾದ ಬಿಲ್ ವಿತರಿಸಲಾಗುವುದು ಎಂದು ಹಾಗೂ<br>2)ಪಂಚಾಯ್ತಿ ವತಿಯಿಂದ ಸ್ವಯಂ ನಿರ್ವಹಣೆ ಯೋಜನೆಯಲ್ಲಿ ಕಾಮಗಾರಿ ನಿರ್ವಹಿಸಲು ಗ್ರಾಹಕರಿಗೆ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಸೂಚಿಸಿದರು. |
| 6) | ಆದರ್ಶ<br>ಬಾಲಶಂಕರ್<br>ಕೆ.ಎಸ್.ಶಿವಶಂಕರ್<br>ಕೂಗೇಕೋಡಿ ಗ್ರಾಮ | 1)ಕೂಗೇಕೋಡಿ ಕುಡಿಯುವ ನೀರು ಸ್ಥಾವರಕ್ಕೆ ಪ್ರತ್ಯೇಕ ಪರಿವರ್ತಕ ಅಳವಡಿಸಿಕೊಡುವಂತೆ ಕೇಳಿಕೊಂಡರು.<br>2)ಲೈನಿನ ತಂತಿಗಳು ಜೋತುಬಿದ್ದಿದ್ದು, ಮಧ್ಯಂತರ ಕಂಬ ಅಳವಡಿಸುವಂತೆ ಕೇಳಿಕೊಂಡರು.<br>3)ಬಾಲಶಂಕರ್ ಕೂಗೇಕೋಡಿ ರವರು ವಿದ್ಯುತ್ ಆರ್.ಆರ್ ಸಂಖ್ಯೆಯ ಖಾತೆಯನ್ನು ತಂದೆಯ ಹೆಸರಿನಿಂದ ನನ್ನ ಹೆಸರಿಗೆ ಹೆಸರು ಬದಲಾವಣೆ ಮಾಡಲು ಕೇಳಿದರು.<br>4)ಕೂಗೇಕೋಡಿ ಕುಶಾಲಪ್ಪರವರ ಒಂದು ಹಸು ವಿದ್ಯುತ್ ಅಪಘಾತದಿಂದ ಮೃತ ಪಟ್ಟಿದ್ದು,ಇದುವರೆಗು ಪರಿಹಾರ ಧನ ಬಂದಿರುವುದಿಲ್ಲ ಎಂದು ಕೇಳಿದರು. | 1)ಸ್ಥಳ ಪರಿಶೀಲಿಸಿ ಪ್ರತ್ಯೇಕ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ಸಲ್ಲಿಸುವಂತೆ ಶಾಖಾಧಿಕಾರಿಯವರಿಗೆ ಹಾಗೂ<br>2)ಎಲಿಫೇಂಟ್ ಕಾರಿಡಾರ್ ಯೋಜನೆ ಅಥ ನಿಗಮದ ವತಿಯಿಂದ ಮಧ್ಯಂತರ ಕಂಬ ಅಳವಡಿಸುವುದಕ್ಕೆ ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿಯವರಿಗೆ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಸೂಚಿಸಿದರು.<br>3)ಸೂಕ್ತ ದಾಖಲಾತಿಗಳನ್ನು ನೀಡಿದಲ್ಲಿ ಹೆಸರು ಬದಲಾವಣೆ ಮಾಡಿಕೊಡಲಾಗುವುದು ಎಂದು ಹಾಗೂ<br>4)ಪರಿಶೀಲಿಸಿ ಪರಿಹಾರ ಧನವನ್ನು ಒದಗಿಸಲಾಗುವುದು ಎಂದು ಕಾರ್ಯನಿರ್ವಾಹಕ ಇಂಜಿನಿಯರ್ ರವರು ತಿಳಿಸಿದರು. |
| 7) | ಕೆ.ಹೆಚ್.ಲಕ್ಷೀ<br>ನಗರೂರು | 1)ಮನೆಯ ವಿದ್ಯುತ್ ಬಿಲ್ ಜಾಸ್ತಿ ಬರುತ್ತಿದ್ದು ಸರಿಪಡಿಸಲು ತಿಳಿಸಿದರು. | 1)ಮಾಪಕ ಪರಿಶೀಲಿಸಿ ಸರಿಪಡಿಸುವಂತೆ ಶಾಖಾಧಿಕಾರಿಯವರಿಗೆ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಸೂಚಿಸಿದರು. |
| 8) | ದುದ್ದಯ್ಯ<br>ತಲ್ತಾರೆ ಶೆಟ್ಟಳ್ಳಿ | 1)ತಲ್ತಾರೆ ಶೆಟ್ಟಳ್ಳಿ ಗ್ರಾಮದಲ್ಲಿರುವ ಪರಿವರ್ತಕವನ್ನು ಬೇರೆ ಸ್ಥಳಕ್ಕೆ ಶಿಫ್ಟ್ ಮಾಡಲು ತುಂಬಾ ಸಲ ಕೇಳಿಕೊಂಡರು ಇನ್ನೂ ಕೆಲಸ ಆಗಿರುವುದಿಲ್ಲ ಕಾರಣವೇನು ಎಂದು ಅಸಮಾಧಾನ ವ್ಯಕ್ತ ಪಡಿಸಿದರು. | 1) ವಿಭಾಗ ಕಛೇರಿಯಿಂದ ಅಂದಾಜು ಪಟ್ಟಿ ಕಾರ್ಯದೇಶ ನೀಡಲಾಗಿದ್ದು, ಕಾಮಗಾರಿ ಕೈಗೆತ್ತಿಕೊಳುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಸೂಚಿಸಿದರು. |

| | | | |
|---|---|---|---|
| 9) | ಪೊನ್ನಪ್ಪ ತಾಕೇರಿ | 1)ತಾಕೇರಿ ಹಸಿರುಕಳ್ಳಿ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆ ಇದ್ದು ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೇಳಿಕೊಂಡರು.<br><br>2)ಕೃಷಿ ಪಂಪುಸೆಟ್ ಸ್ಥಾವರಗಳಿಗೆ ಇಲಾಖಾ ವತಿಯಿಂದ ಯಾವ ರೀತಿಯ ಅನುಕೂಲಗಳಿವೆ ಎಂದು ಕೇಳಿದರು. | 1)ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ಸಲ್ಲಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಶಾಖಾಧಿಕಾಯವರಿಗೆ ಸೂಚಿಸಿದರು.<br><br>2)ನೂತನ ಪಂಪುಸೆಟ್ ಸ್ಥಾವರಗಳಿಗೆ ತ್ವರಿತ ವಿದ್ಯುತ್ ಯೋಜನೆ ಮುಖಾಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.ಅರ್ಜಿದಾರರು ಲೈನ್ ಮತ್ತು ಪರಿವರ್ತಕ ಕೇಂದ್ರವನ್ನು ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಕಾಮಗಾರಿ ನಿರ್ವಹಿಸಿದಲ್ಲಿ ಪರಿವರ್ತಕವನ್ನು ನಿಗಮದಿಂದ ನೀಡಲಾಗುವುದು ಎಂದು ತಿಳಿಸಿದರು. |

ತಮ್ಮ ವಿಶ್ವಾಸಿ

ಕಾರ್ಯನಿರ್ವಾಹಕ ಇಂಜಿನಿಯರ್(ವಿ).
ಕಾರ್ಯ ಮತ್ತು ಪಾಲನೆ ವಿಭಾಗ.
ಚಾ.ವಿ.ಸ.ನಿ.ನಿ., ಮಡಿಕೇರಿ

ಪ್ರತಿಯನ್ನು

1. ಮುಖ್ಯ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನೆ ವಲಯ, ಚಾ.ವಿ.ಸ.ನಿ.ನಿ.,ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ
2. .
3. ಪ್ರಧಾನ ವ್ಯವಸ್ಥಾಪಕರು(ವಾ) ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು. ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ
4. ವ್ಯವಸ್ಥಾಪಕ ನಿರ್ದೇಶಕರ ಕಾರ್ಯ ನಿರ್ವಾಹಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು. ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಅಧೀಕ್ಷಕ ಇಂಜಿನಿಯರ್(ವಿ),ಸೆಸ್ಕ್ ಕಾ ಮತ್ತು ಪಾ ವೃತ್ತ, ಕೊಡಗು- ಚಾಮರಾಜನಗರ ಮೈಸೂರು. ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ
6. ನಿರ್ದೇಶಕರು(ತಾ) ರವರ ತಾಂತ್ರಿಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
7. ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ).ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾ.ವಿ.ಸ.ನಿ.ನಿ, ಕುಶಾಲನಗರ.
8. ಕಚೇರಿ ಪ್ರತಿ.